## ಕಾಪು ಶ್ರೀ ಹೊಸ ಮಾರಿಗುಡಿ ದೇವಸ್ಥಾನ ಅಭಿವೃದ್ಧಿ ಸಮಿತಿ

**ಕಾಪು, ಉಡುಪಿ ಜಿಲ್ಲೆ.**

### ಅಭಿವೃದ್ಧಿ ಸಮಿತಿಯ ಪದಾಧಿಕಾರಿಗಳು

ಗೌರವಾಧ್ಯಕ್ಷರುಗಳು : ಶ್ರೀ ವಿನಯಕುಮಾರ್ ಸೊರಕೆ, ಶಾಸಕರು, ಕಾಪು
ಮಾಜಿ ನಗರಾಭಿವೃದ್ಧಿ ಹಾಗೂ ಉಸ್ತುವಾರಿ ಸಚಿವರು, ಕರ್ನಾಟಕ ಸರಕಾರ
ಶ್ರೀ ಬಿ. ಆರ್. ಶೆಟ್ಟಿ, ಬಾವುಗುತ್ತು
ಆಡಳಿತ ನಿರ್ದೇಶಕರು, ಎನ್. ಎಮ್. ಸಿ. ಅಬುದಾಬಿ
ಶ್ರೀ ಸುಧಾಕರ್ ಹೆಗ್ಡೆ,
ಆಡಳಿತ ನಿರ್ದೇಶಕರು, ತುಂಗಾ ಗ್ರೂಪ್ ಆಫ್ ಹೋಟೆಲ್ಸ್, ಮುಂಬೈ
ಶ್ರೀ ಜಯ ಸಿ. ಸುವರ್ಣ, ಅಧ್ಯಕ್ಷರು, ಬಿಲ್ಲವರ ಮಹಾ ಮಂಡಲ, ಮುಲ್ಕಿ
ಶ್ರೀ ಪ್ರಕಾಶ್ ಶೆಟ್ಟಿ, ಆಡಳಿತ ನಿರ್ದೇಶಕರು, ಎಮ್. ಆರ್. ಜಿ ಗ್ರೂಪ್, ಬೆಂಗಳೂರು
ಶ್ರೀ ರಾಮ ಶ್ರೀಯಾನ್, (ದಕ್ಷಿಣ ಆಫ್ರಿಕಾ), ಶ್ರೀಯಾನ್ ಸದನ, ಕಾಪು.
ಶ್ರೀ ಸುಧೀರ್ ವಿ. ಶೆಟ್ಟಿ, ಆಡಳಿತ ನಿರ್ದೇಶಕರು, ಚರಿಷ್ಮಾ ಬಿಲ್ಡರ್, ಮುಂಬೈ.
ಶ್ರೀ ರವಿ ಸುಂದರ್ ಶೆಟ್ಟಿ, ಆಡಳಿತ ನಿರ್ದೇಶಕರು,
ಸಾಯಿಪ್ಯಾಲೇಸ್ ಗ್ರೂಪ್ ಆಫ್ ಹೋಟೆಲ್ಸ್, ಮುಂಬೈ
ಶ್ರೀ ಅನಿಲ್ ಬಲ್ಲಾಳ್, ಕಾಪು ಬೀಡು, ಬಲ್ಲಾಲ್ ಅಸೋಸಿಯೇಟ್ಸ್, ಮಂಗಳೂರು.

ಅಧ್ಯಕ್ಷರು : ಶ್ರೀ ಕೆ. ವಾಸುದೇವ ಶೆಟ್ಟಿ, ಉಳಿಯಾರಗೋಳಿ
ಆಡಳಿತ ನಿರ್ದೇಶಕರು, ದೇವಿಪ್ರಸಾದ್ ಕನ್‌ಸ್ಟ್ರಕ್ಷನ್ಸ್ ಪ್ರೈ. ಲಿ., ಕಾಪು.


ಉಪಾಧ್ಯಕ್ಷರು : ಶ್ರೀ ಕೆ. ದಿವಾಕರ ಶೆಟ್ಟಿ ಕೋತ್ವಾಲಗುತ್ತು
ಅಧ್ಯಕ್ಷರು, ಸಿ.ಎ. ಬ್ಯಾಂಕ್, ಕಾಪು
ಶ್ರೀ ಮಾಧವ ಆರ್. ಪಾಲನ್, ಅಧ್ಯಕ್ಷರು, ಬಿಲ್ಲವ ಸಂಘ, ಕಾಪು
ಡಾ. ದೇವಿ ಪ್ರಸಾದ್ ಶೆಟ್ಟಿ,
ಅಧ್ಯಕ್ಷರು, ಬೆಳಪು ಗ್ರಾಮ ಪಂಚಾಯತ್ & ಬೆಳಪು ಸಿ. ಎ. ಬ್ಯಾಂಕ್
ಶ್ರೀ ಗಂಗಾಧರ ಸುವರ್ಣ, ಕಾಪು ಪಡು
ಶ್ರೀ ಮನೋಹರ ಶೆಟ್ಟಿ, ಆಡಳಿತ ನಿರ್ದೇಶಕರು, ಸಾಯಿರಾಧಾ ಡೆವಲಪ್ಪರ್ಸ್, ಉಡುಪಿ.

ಕಾರ್ಯದರ್ಶಿ : ಶ್ರೀ ರಮೇಶ್ ಹೆಗ್ಡೆ, ಕಲ್ಯ
ಮಾಜಿ ಅಧ್ಯಕ್ಷರು, ಶ್ರೀ ಹೊಸ ಮಾರಿಗುಡಿ ದೇವಸ್ಥಾನ, ಕಾಪು.

ಜೊತೆ ಕಾರ್ಯದರ್ಶಿ : ಶ್ರೀ ನಿರ್ಮಲ್ ಕುಮಾರ್ ಹೆಗ್ಡೆ,
ಮುಖ್ಯೋಪಾಧ್ಯಾಯರು, ಶ್ರೀ ರಾಮ ಹಿರಿಯ ಪ್ರಾಥಮಿಕ ಶಾಲೆ, ಕರಂದಾಡಿ

ಕೋಶಾಧಿಕಾರಿ : ಶ್ರೀ ಪ್ರಶಾಂತ್ ಕುಮಾರ್ ಶೆಟ್ಟಿ
ಕಾರ್ಯನಿರ್ವಹಣಾಧಿಕಾರಿ, ಶ್ರೀ ಹೊಸ ಮಾರಿಗುಡಿ ದೇವಸ್ಥಾನ, ಕಾಪು.

ಗೌರವ ಸಲಹೆಗಾರರು : ಶ್ರೀ ಕೆ. ಪಿ. ಆಚಾರ್ಯ, ಸಂಚಾಲಕರು,
ವಿದ್ಯಾನಿಕೇತನ ಸಮೂಹ ವಿದ್ಯಾ ಸಂಸ್ಥೆ, ಕಾಪು
ಶ್ರೀ ಲಾಲಾಜಿ ಆರ್. ಮೆಂಡನ್, ಮಾಜಿ ಶಾಸಕರು, ಕಾಪು
ಶ್ರೀ ರಾಘವೇಂದ್ರ ತಂತ್ರಿ, ವಿದ್ವಾನ್, ಕೊರಂಗ್ರಪಾಡಿ
ಶ್ರೀ ಸಚ್ಚಿದಾನಂದ ಶೆಟ್ಟಿ, ಬಾವುಗುತ್ತು, ಉಳಿಯಾರಗೋಳಿ
ಶ್ರೀ ಸುರೇಶ್ ಶೆಟ್ಟಿ, ಗುರ್ಮೆ, ಉದ್ಯಮಿ, ಬಳ್ಳಾರಿ.
ಶ್ರೀ ವೈ ಶಶಿಧರ ಶೆಟ್ಟಿ, ಎರ್ಮಾಳು
ಶ್ರೀ ಡಾ. ಪ್ರಭಾಕರ ಶೆಟ್ಟಿ,
ಆಡಳಿತ ನಿರ್ದೇಶಕರು, ಪ್ರಶಾಂತ್ ನರ್ಸಿಂಗ್ ಹೋಮ್, ಕಾಪು.
ಶ್ರೀ ಸುಬ್ರಮಣ್ಯ ಶೆಟ್ಟಿ, ಮಲ್ಲಾರು ಗುತ್ತು
ಮಾಜಿ ಅಧ್ಯಕ್ಷರು, ಶ್ರೀ ಹೊಸ ಮಾರಿಗುಡಿ ದೇವಸ್ಥಾನ, ಕಾಪು.
ಶ್ರೀ ಕೆ. ರತ್ನಾಕರ ಶೆಟ್ಟಿ, ನಡಿಕೆರೆ
ಮಾಜಿ ಅಧ್ಯಕ್ಷರು, ಶ್ರೀ ಹೊಸ ಮಾರಿಗುಡಿ ದೇವಸ್ಥಾನ, ಕಾಪು.



॥ ಒಡೆಯ ಲಕ್ಷ್ಮೀ ಜನಾರ್ಧನ ಪ್ರಸನ್ನ ॥

# ಕಾಪು ಶ್ರೀ ಹೊಸ ಮಾರಿಗುಡಿ ದೇವಸ್ಥಾನ

## ಕಾಪು ಶ್ರೀ ಹೊಸ ಮಾರಿಗುಡಿ ದೇವಸ್ಥಾನ ಅಭಿವೃದ್ಧಿ ಸಮಿತಿ

ಕಾಪು–574106, ಉಡುಪಿ ಜಿಲ್ಲೆ.



# ಅಮ್ಮನ ಆಲಯದ 'ಹೂದೋಟ'ದಲ್ಲೊಂದು 'ಸುಂದರ ಮಂದಿರ' ಸಾಕಾರಕ್ಕೆ ಸಾವಿರ ಸೀಮೆ ಸಾರುವ

# ಭಿನ್ನಹ

Book-Post

ಶ್ರೀಮತಿ/ಶ್ರೀ.............................................................

.............................................................

.............................................................

॥ ಒಡೆಯ ಲಕ್ಷ್ಮೀ ಜನಾರ್ಧನ ಪ್ರಸನ್ನ ॥

# ಕಾಪು ಶ್ರೀ ಹೊಸ ಮಾರಿಗುಡಿ ದೇವಸ್ಥಾನ

## ಕಾಪು ಶ್ರೀ ಹೊಸ ಮಾರಿಗುಡಿ ದೇವಸ್ಥಾನ ಅಭಿವೃದ್ಧಿ ಸಮಿತಿ

**ಕಾಪು – 574106, ಉಡುಪಿ ಜಿಲ್ಲೆ.**

ಭಗವತ್ಭಕ್ತರೇ,

**'ಕಾಪು'** ಎಂಬುದು ಚಾರಿತ್ರಿಕ ಹಿನ್ನೆಲೆಯ ಪುರಾತನ ಧಾರ್ಮಿಕ ಶ್ರದ್ಧಾ ಕೇಂದ್ರವಾಗಿದ್ದು, ಉಡುಪಿ ಜಿಲ್ಲೆಯ ಪುಣ್ಯ ಕ್ಷೇತ್ರವೂ ಆಗಿರುತ್ತದೆ. ಇಲ್ಲಿ ನೆಲೆ ನಿಂತಿರುವ ಶ್ರೀ ದೇವಿ ಮಾರಿಯಮ್ಮ ಅತಿಪ್ರತಾಪಿತ ಶಕ್ತಿದೇವತೆಯೆಂದು ಪ್ರಸಿದ್ಧಳು. ಶಕ್ತಿದೇವಿಯ ಪವಿತ್ರ ಪೀಠಗಳಲ್ಲಿ ಕಾಪುವಿನ ಮಾರಿಯಮ್ಮನ ಕ್ಷೇತ್ರವೂ ಒಂದು. ಕಾಪುವಿನ ಶ್ರೀ ಮಾರಿಯಮ್ಮ ಮಾರಿಯಾಗಿ, ಮಾರಿಯಮ್ಮಳಾಗಿ, ಮಹಾಕಾಳಿಯಾಗಿ, ಮಹಾಲಕ್ಷ್ಮಿಯಾಗಿ, ಮಹಾಸರಸ್ವತಿಯಾಗಿ ಸಕಲರನ್ನು ಕಾಯುವ ಮಹಾಶಕ್ತಿಯಾಗಿ ನೆಲೆಸಿರುತ್ತಾಳೆ

**'ಅಮ್ಮಾ.....'** ಈ ಎರಡಕ್ಷರದ ಶಬ್ಧಕ್ಕಿರುವ ಭಾವನೆಗಳು ಅಮೂಲ್ಯ. **"ತಾಯಿ"**ಯ ಸಂಬಂಧವನ್ನು ನೆನಪಿಸಿ ಸ್ಥಾಯಿಗೊಳಿಸಬಲ್ಲ ಅನನ್ಯತೆ ಅನ್ಯ ಸಂಬಂಧ ವಾಚಕಗಳಿಲ್ಲ. ಇದು ಅಪ್ಪಟ ಸತ್ಯ. ನಿಷ್ಕಳಂಕ ಅನುಬಂಧ ವಾತ್ಸಲ್ಯ–ಕರುಣೆಯ ನಿಧಿ. ಆದುದರಿಂದ **'ಅಮ್ಮಾ.....'** ಎಂಬುದು ಶ್ರೇಷ್ಠ, ಜ್ಯೇಷ್ಠ, ಸರ್ವಮಾನ್ಯ, ಪ್ರೀತಿಯ ಉಗಮಸ್ಥಾನ. ಹಾಗಾಗಿ **'ಕಾಪುದ ಅಪ್ಪೆ'** ಎಂಬ ತಾಯಿಗೆ ನಿರ್ಮಿಸಲುದ್ದೇಶಿಸಿರುವ ದೇವಾಲಯ, ದೇವನಗರಿಯಂತೆ ಶೃಂಗಾರಗೊಳ್ಳಬೇಕೆಂಬ ಆಶಯದೊಂದಿಗೆ ಈ ಬಿನ್ನಹ.

ಲಿಂಗಣ್ಣ ಕವಿಯು **"ಕೆಳದಿನೃಪವಿಜಯ"** ಗ್ರಂಥದಲ್ಲಿ ವಿವರಿಸಿರುವಂತೆ ಕ್ರಿ.ಶ 1743ರಲ್ಲಿ ಕೆಳದಿಯ ರಾಜ ಬಸಪ್ಪನಾಯಕನು ಕಾಪು ಕಡಲ ತೀರದಲ್ಲಿ ಮನೋಹರಗಡ ಎಂಬ ಕೋಟೆಯನ್ನು, ಕಾಪು ಹೊರವಲಯದ ಮಲ್ಲಾರಿನಲ್ಲಿ ಸೇನೆ ವಿಶ್ರಮಿಸಲು ದೊಡ್ಡ ಕೋಟೆಯೊಂದನ್ನು ರಚಿಸಿದ್ದರೆನ್ನಲಾಗಿದ್ದು, ಈ ಸೈನಿಕರು ತಮ್ಮ ಯುದ್ಧದೇವತೆಯಾಗಿ ತಮ್ಮೊಂದಿಗೆ ಕರೆತಂದು ಆರಾಧಿಸಿದ **"ದಂಡಿನ ಮಾರಿ"** ಎಂಬ ಶಕ್ತಿಯೇ ಇಂದಿನ ಕಾಪುವಿನ ಮಾರಿಯಮ್ಮ ಎಂದು ಭಕ್ತಜನರಿಂದ ಆರಾಧಿಸಲ್ಪಡುತ್ತಿದ್ದಾಳೆ. ಕ್ರಿ.ಶ 1830ರಲ್ಲಿ ಈಗಿನ ಹೊಸ ಮಾರಿಗುಡಿಯನ್ನು ನಿರ್ಮಿಸಲಾಗಿತ್ತೆಂದು ಇತಿಹಾಸದಿಂದ ತಿಳಿದು ಬರುತ್ತದೆ.

ಈ ದೇವಸ್ಥಾನಕ್ಕೆ ಉತ್ತರ ಕನ್ನಡ, ಶಿವಮೊಗ್ಗ, ತುಳುನಾಡ ಜಿಲ್ಲೆಗಳಲ್ಲದೆ ದಕ್ಷಿಣ ಭಾರತದಾದ್ಯಂತದಿಂದ ಭಕ್ತರ ಮಹಾಪೂರವೇ ಹರಿದು ಬರುತ್ತದೆ. ಹಾಗಾಗಿ ಕಾಪು ಮಾರಿಗುಡಿಯಲ್ಲಿ ವಾರ್ಷಿಕವಾಗಿ ನಡೆಯುವ 3 ಮಾರಿಪೂಜೆಗಳಲ್ಲಿ ಸುಗ್ಗಿಯ ಮಾರಿ ಪೂಜೆ ಎಂಬುದು ತುಳುನಾಡಿನ ಸಪ್ತ ಮಹಾಜಾತ್ರೆಗಳಲ್ಲಿ ಒಂದೆಂದು ಪ್ರಸಿದ್ಧಿ ಪಡೆದಿದೆ. ಈ ಜಾತ್ರೆಗೆ ಕರ್ನಾಟಕ ರಾಜ್ಯದಾದ್ಯಂತದಿಂದ ಭಕ್ತರು ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿ ದೇವಿಯ ದರ್ಶನ ಪಡೆಯುತ್ತಾರೆ.

**"ತಾಯಿ"** ಅಪ್ಪೆ, ಜನನಿ ಮಕ್ಕಳಿಗೆ ಜನ್ಮ ನೀಡುವ ಹಾಗೂ ಪೋಷಿಸುವ ಆಕೆಯ ಶಕ್ತಿಗಾಗಿಯೇ ಭಾರತೀಯ ಪರಂಪರೆ ಆರಂಭದಿಂದಲೂ ಸ್ತ್ರೀಯರನ್ನು ಆರಾಧಿಸುತ್ತಾ ತಾಯಿಯನ್ನು ಉನ್ನತ ಸ್ಥಾನದಲ್ಲಿಟ್ಟು ಗೌರವಿಸುತ್ತಾ ಬಂದಿರುತ್ತದೆ. ಕಾರುಣ್ಯಮಯಿಯಾಗಿ, ರಕ್ಷಕಳಾಗಿ ಮನುಕುಲವನ್ನು ಪೊರೆಯುವ ಜಗದಮ್ಮೆಯಾಗಿ ಸರ್ವವ್ಯಾಪಿಯಾಗಿರುವ ಮಾತೃಶಕ್ತಿ ಕಾಪುವಿನಲ್ಲಿ ನೆಲೆಯಾದದ್ದು, ಮಾರಿಯಾಗಿ ಮಹಾಮಾರಿಯಾಗಿ ಭಕ್ತರ ದುರಿತಗಳನ್ನು ನಿವಾರಿಸಿ ಆ ಮೂಲಕ ಮಾತೃ ವಾತ್ಸಲ್ಯದ ಮಾಧುರ್ಯವನ್ನು ಮಾನವ ಕೋಟಿಗೆ ಹಂಚುವ **'ಅಮ್ಮ'**ನ ಆಲಯ ಭವ್ಯವಾಗಿರಬೇಕೆಂಬುದು ನಮ್ಮ ಸಂಕಲ್ಪ. ಮಾನವರಾಗಿ ನಮಗೆ ಎಷ್ಟು ಸಾಧ್ಯವೋ ಅಷ್ಟು ವೈಭವವು ಪಡಿಮೂಡುವಂತೆ ಯೋಜನೆ ಸಿದ್ಧಗೊಳಿಸಿದ್ದೇವೆ. ಅಮ್ಮನೊಂದಿಗೆ ಕಷ್ಟ ಸುಖ ಬಿನ್ನವಿಸಿಕೊಳ್ಳಲು ಬರುವ ಆಸ್ತಿಕರು, ರಕ್ಷಣೆ ಬೇಡಲು ಬರುವ ದೀನರು, ತಮ್ಮ ವಿನಮ್ರ ವಿನಂತಿಯನ್ನು ಮಂಡಿಸಲು ಬರುವಾಗ ನಿರ್ಮಲ, ನಿಷ್ಕಳಂಕ ಮನಃಸ್ಥಿತಿ ಅಗತ್ಯ. ಆಗ ಮಾತ್ರ ಅಮ್ಮನೊಂದಿಗೆ ನೇರವಾಗಿ ಭಾವಗಳನ್ನು ಹಂಚಿಕೊಳ್ಳಲು ಸಾಧ್ಯವಾಗುತ್ತದೆ. ಅದಕ್ಕಾಗಿ ದೇವಾಲಯ ಸಮುಚ್ಚಯ ಪ್ರದೇಶದಲ್ಲಿ ಸುಂದರ ನೋಟವನ್ನು ಒದಗಿಸುವ ಉದ್ಯಾನವನ ನಿರ್ಮಿಸಲಾಗುವುದು. ಒಂಭತ್ತು ಎಂಬ ನವಶಕ್ತಿಯ–ನವದುರ್ಗೆಯರ ಒಂಭತ್ತು ಸೋಪಾನಗಳು, ಒಂಭತ್ತು ಹಂತಗಳು, ಒಂಭತ್ತು ಗೋಪುರಗಳು ಇರುವಂತೆ ನವ ನಿರ್ಮಾಣ ನಡೆಯಲಿದೆ. ಈ ಮೂಲಕ ಸುಂದರ ಶಿಲ್ಪಗಳ ಕಲವರ, ಮನೋಹರ ದೃಶ್ಯಾವಳಿಗಳ ಅನಾವರಣ, ವಾಸ್ತು ವಿನ್ಯಾಸ, ನಿರ್ಮಾಣ ಶೈಲಿಗಳೊಂದಿಗೆ ವಿದ್ವಾಂಸರ ಮತ್ತು ವಿಷಯ ತಜ್ಞರ ಸಲಹೆಯಂತೆ **"ಅಮ್ಮ"**ನ ಆಲಯ ಸಿದ್ಧಗೊಳಿಸಲಾಗುವುದು. ನವೀಕರಣಗೊಳ್ಳುವ ಈ ಆಲಯವು ಸಂಪೂರ್ಣ ಶಿಲಾಮಯ ವಾಗಲಿರುವುದರಿಂದ ಭಕ್ತರು ಶಿಲಾಸೇವೆಯ ಮೂಲಕ ಅಮ್ಮನ ಅಡಿದಾವರೆಗೆ ಶಿಲಾಪುಷ್ಪವನ್ನು ಅರ್ಪಿಸಬೇಕಾಗಿ ವಿನಂತಿ.

## ಶಿಲಾಸೇವೆಯ ವಿವರ

ಈ ಕೆಳಗಿನ ವಿಶೇಷ ಸೇವೆಯನ್ನು ನೀಡುವ ಭಕ್ತರ ಹೆಸರನ್ನು "ಅಮೃತ ಶಿಲೆಯಲ್ಲಿ ಪ್ರಕಟಿಸಿ, **ಬ್ರಹ್ಮಕಲಶದ ಸಂದರ್ಭದಲ್ಲಿ ಗೌರವಾನ್ವಿತ ಸೇವಾದಾರರಾಗಿ ಸನ್ಮಾನಿಸಲಾಗುವುದು.**

| | |
|---|---|
| 1. ಗರ್ಭಗುಡಿಯ ಸೇವೆ | ರೂ. 309 ಲಕ್ಷ |
| 2. ರಾಜಗೋಪುರವನ್ನೊಳಗೊಂಡ ಮುಖಮಂಟಪ | ರೂ. 209 ಲಕ್ಷ |
| 3. ಪೂರ್ವ ದಿಕ್ಕಿನ ಚಂದ್ರಶಾಲೆ | ರೂ. 159 ಲಕ್ಷ |
| 4. ಪಶ್ಚಿಮ ದಿಕ್ಕಿನ ಚಂದ್ರಶಾಲೆ | ರೂ. 159 ಲಕ್ಷ |
| 5. ದಕ್ಷಿಣ ದಿಕ್ಕಿನ ಚಂದ್ರಶಾಲೆ | ರೂ. 159 ಲಕ್ಷ |
| 6. ಉತ್ತರ ದಿಕ್ಕಿನ ಚಂದ್ರಶಾಲೆ | ರೂ. 159 ಲಕ್ಷ |
| 7. ಉಚ್ಛಂಗಿ ಗುಡಿಯ ಸೇವೆ | ರೂ. 99 ಲಕ್ಷ |

### 999 ಶಿಲಾಸೇವೆ ಬಾಬ್ತು ರೂ. 999999/-

999 ಶಿಲಾಸೇವೆ ನೀಡಿದ ಭಕ್ತರ ಹೆಸರನ್ನು ಅಮೃತ ಶಿಲೆಯಲ್ಲಿ ಪ್ರಕಟಿಸಿ **ಬ್ರಹ್ಮಕಲಶೋತ್ಸವ ಸಮಾರಂಭದಲ್ಲಿ ಮಹಾ ಸೇವಾದಾರರಾಗಿ ಗೌರವಿಸಲಾಗುವುದು.**

### 99 ಶಿಲಾಸೇವೆ ಬಾಬ್ತು ರೂ. 99999/-

99 ಶಿಲಾ ಸೇವೆ ಮತ್ತು ಮೇಲ್ಪಟ್ಟು ಶಿಲಾಸೇವೆ ನೀಡಿದ ಭಕ್ತರ ಹೆಸರನ್ನು ಅಮೃತ ಶಿಲೆಯಲ್ಲಿ ನಮೂದಿಸಿ **ಬ್ರಹ್ಮಕಲಶೋತ್ಸವ ಸಮಾರಂಭದಲ್ಲಿ ವಿಶೇಷ ಸೇವಾದಾರರಾಗಿ ಗೌರವಿಸಲಾಗುವುದು.**

ಪ್ರತಿಯೊಬ್ಬ ಭಕ್ತರೂ ಕನಿಷ್ಠ 9 ಶಿಲಾ ಸೇವೆಯ ಬಾಬ್ತು ರೂ. 9999/– ನೀಡಿ ನಿಮ್ಮ ಅಮ್ಮನವರ ಪಾದಕ್ಕೆ ಶಿಲಾಪುಷ್ಪವನ್ನು ಸಮರ್ಪಿಸಿ, ಪ್ರಸಾದ ಪಡೆದುಕೊಳ್ಳಬೇಕಾಗಿ ವಿನಂತಿ

ಸೇವೆಯನ್ನು ನೀಡುವ ಭಕ್ತರು ಈ ಕೆಳಗೆ ಕಾಣಿಸಿದ **ಕಾಪು ಶ್ರೀ ಹೊಸ ಮಾರಿಗುಡಿ ದೇವಸ್ಥಾನ ಅಭಿವೃದ್ಧಿ ಸಮಿತಿಯ** ಬ್ಯಾಂಕ್ ಖಾತೆಗಳಲ್ಲಿ ಸೇವೆಯ ಮೊತ್ತವನ್ನು ಜಮಾ ಮಾಡಿ ಅಭಿವೃದ್ಧಿ ಸಮಿತಿಯ ಕಛೇರಿಗೆ ತಮ್ಮ ವಿವರಗಳನ್ನು ತಿಳಿಸಬೇಕಾಗಿ ವಿನಂತಿ.

Corporation Bank, Uliyaragoli, Kaup

A/C No. - 023800101032592 IFSC - CORP0000238

Syndicate Bank Kaup

A/C No. - 01252200126232 IFSC - SYNB0000125

Canara Bank Town Branch Udupi

A/C No. - 0630101059019 IFSC - CNRB0000630